National Extension Scheme Block in Arkalgud and Hole-Narsipur.

Q.—68. Sri H. K. SIDDAIYA (Belur—Scheduled Castes).—

Will the Government be pleased to state :—

(*a*) how many years back the National Extension Scheme was introduced in the taluks of Arkalgud and Hole-Narasipur in Hassan District ;

(*b*) how many villages have been benefited till now and the items of works that have been carried out under the scheme ;

(*c*) in how many villages facilities have been provided to backward classes and what are those facilities ?

A.—Dr. R. NAGAN GOWDA (Minister for Agriculture).—

(*a*) The Holenarasipur-Arkalgud Block was started on the 2nd October 1953.

In October 1954, Arkalgud Taluk was separated and constituted into a separate Block.

(*b*) (i) 551.

(ii) Printed progress reports are circulated to members.

(*c*) The term "Backward classes" used in the question is not clear. The scheme contemplates development of the entire area and confers equal benefits on all classes and communities of the population without any discrimination against or in favour of any community.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಹಾಸನ ಡಿಸ್ಟ್ರಿಕ್ಟಿನ ಮಲೆನಾಡು ತಾಲ್ಲೂಕುಗಳಾದ ಅಲೂರು, ಮಂಜರಾಬಾದು, ಸಕಲೇಶಪುರ ತಾಲ್ಲೂಕುಗಳಿಗೆ ಯಾವಾಗ ಕೊಡುತ್ತೀರಿ?

*ಡಾ॥ ಆರ್. ನಾಗನಗೌಡ.—ಹಾಗೆ ಯಾವಾಗ ಕೊಡುವುದಕ್ಕಾಗುತ್ತದೆ ಎಂದು ಹೇಳುವುದು ಸ್ವಲ್ಪ ಕಷ್ಟವಾದ ಕೆಲಸ. ಇಂದಿನವರೆಗೂ ನಮಗೆ ಒಟ್ಟು 22 ಬ್ಲಾಕುಗಳನ್ನು ಕೊಟ್ಟಿದ್ದಾರೆ. ಅಕ್ಟೋಬರ್ ನಲ್ಲಿ ಮತ್ತೊಂದು ಐದು ಬ್ಲಾಕುಗಳನ್ನು ಕೊಟ್ಟಿದ್ದಾರೆ. 22 ಬ್ಲಾಕುಗಳನ್ನು ನಾವು 10 ಜಿಲ್ಲೆಗಳಿಗೂ ಒಂದೊಂದಕ್ಕೆ ಎರಡರಂತೆ ಕೊಟ್ಟಿದ್ದೇವೆ. ಆ ತರುವಾಯ ಇನ್ನು ಉಳಿದ ಎರಡನ್ನು ತುಮಕೂರಿಗೆ ಒಂದು, ಬೆಂಗಳೂರಿಗೆ ಒಂದು ಕೊಟ್ಟಿದ್ದೇವೆ. ಮತ್ತೆ ಐದು ಬ್ಲಾಕುಗಳನ್ನು ಈಗ ಯಾವಯಾವ ಜಿಲ್ಲೆಗಳಲ್ಲಿ ಎರಡೆರಡು ಬ್ಲಾಕುಗಳೆಯೋ ಆ ಜಿಲ್ಲೆಗಳಿಗೆ ಕೊಟ್ಟಿದ್ದೇವೆ. ಏಕ್ಕಿವಕ್ಕೆ ಕೊಡಲು ಆಗಿಲ್ಲ. 56-57ರಲ್ಲಿ ಇನ್ನೂ 13 ಬ್ಲಾಕುಗಳು ಬರುತ್ತವೆ ಎಂದು ಹೇಳಿ ನಾವು ಕೇಳಿದ್ದೇವೆ. ಆ ರೀತಿ ಕೊಟ್ಟಾಗ ಸೆಂಟ್ರಲ್ ಕಮ್ಯೂನಿಟಿ ಪ್ರಾಜೆಕ್ಟಿನವರು ನಮಗೆ ಯಾವ ಸೂಚನೆಗಳನ್ನು ಕೊಟ್ಟಿದ್ದಾರೋ ಆ ಸೂಚನೆಗಳ ಪ್ರಕಾರ ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ತಾಲ್ಲೂಕುಗಳಿಗೆ ಕೊಡಬೇಕು ಎಂಬುದನ್ನು ಯೋಚನೆಮಾಡಿ ಕೊಡುತ್ತೇವೆ. ಒಂದು ಮಾತು ಹೇಳಬೇಕಾದರೆ ಎರಡನೆ ಪಂಚವಾರ್ಷಿಕ ಯೋಜನೆ ಆಗುವುದರಲ್ಲಿ ನಾವು ಇಡೀ ಸಂಸ್ಥಾನವನ್ನೇ ಕವರ್ ಮಾಡಬೇಕೆಂದು ಇದ್ದೇವೆ. ಆದ ಕಾರಣ ಸ್ವಲ್ಪ ಹೆಚ್ಚುಕಡಮೆ ಮಾನ್ಯ ಸಿದ್ದಯ್ಯನವರು ಹೇಳಿದ ತಾಲ್ಲೂಕುಗಳಿಗೂ ಬರುತ್ತದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ನಾನು ಈಗ ತಾವು ಹೇಳಿರುವ ಉತ್ತರವನ್ನು ಬಹಳ ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ. ಮುಂದೆ 13 ಬ್ಲಾಕುಗಳು ಬರುತ್ತವೆ ಎಂದು ಹೇಳಿದಿರಲ್ಲಾ.

ಅಧ್ಯಕ್ಷರು.—ತಾವು ಕೇಳಿರುವ ಪ್ರಶ್ನೆ ಅರಕಲಗೂಡು-ಹೊಳೇನರಸೀಪುರಕ್ಕೆ ಸಂಬಂಧಪಟ್ಟಿದ್ದು. ತಾವು ಕೇಳುವ ಉಪಪ್ರಶ್ನೆ ಅಷ್ಟಕ್ಕೆ ಮಾತ್ರ ಸಂಬಂಧಪಡಬೇಕು.

ಶ್ರೀ ಎಚ್. ಕೆ. ಸಿದ್ದಯ್ಯ.—ಆ 13 ಬ್ಲಾಕುಗಳು ಬರುವಾಗ ಮಲೆನಾಡಿನ ತಾಲ್ಲೂಕುಗಳ ಕಷ್ಟನುಖವನ್ನು ಅರಿತು. . . .

ಅಧ್ಯಕ್ಷರು.—ಅದನ್ನು ಈ ಪ್ರಶ್ನೆಯಲ್ಲಿ ಕೇಳಬೇಡಿ. ಇದು ಅರಕಲಗೂಡು-ಹೊಳೇನರಸೀಪುರದಲ್ಲಿ ಯಾವಾಗ ಪ್ರಾರಂಭವಾಯಿತು ಎಂಬುದಕ್ಕೆ ಸೇರಿದ್ದು. ಅದರಿಂದ ಎಷ್ಟು ಉಪಯೋಗವಾಗಿದೆ ಎಂಬುದನ್ನು ಬೇಕಾದರೆ ಕೇಳಿ.

ಶ್ರೀ ಎಚ್. ಕೆ. ಸಿದ್ದಯ್ಯ.—ಕೆಲಸ ಆಗುತ್ತಾ ಇದೆ. ನಾನು ನೋಡುತ್ತಾ ಇದ್ದೇನೆ.

ಅಧ್ಯಕ್ಷರು.—ಹಾಗಾದರೆ ಸರಿ, ಬೇರೆ ಪ್ರಶ್ನೆ ಇದ್ದರೆ ಕೇಳಿ. Next Question.

National Extension Service Blocks (Progress of Work).

Q.—116. Sri G. A. THIMMAPPA GOWDA (Arkalgud).—

Will the Government be pleased to state :—

(*a*) the number of intensive development blocks in the N.E.S. Blocks that have been allotted to this State this year ;

(*b*) the progress of work and the expenditure in each N.E.S. Block in the State under different heads this year ?

A.—Dr. R. NAGAN GOWDA (Minister for Agriculture).—

(*a*) Four for 1955-56.

(*b*) Printed reports are circulated to the members.

ಶ್ರೀ ಜಿ. ಎ. ತಿಮ್ಮಪ್ಪಗೌಡ.—Intensive Development ಬ್ಲಾಕುಗಳನ್ನು ಯಾವ basis ಮೇಲೆ ಮಾಡುತ್ತಿದ್ದೀರಿ?